ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ

ಸಂಖ್ಯೆ: ಸಚುಆ/ಚುನಾವಣೆ/ 6 /2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 10.07.2013

## ಸುತ್ತೋಲೆ

**ವಿಷಯ:-** ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರು/ಇತರೆ ನೌಕರರು ಚುನಾವಣೆಯಲ್ಲಿ ಮತ್ತು ರಾಜಕೀಯದಲ್ಲಿ ಭಾಗವಹಿಸುವಿಕೆ

**ಉಲ್ಲೇಖ:-** ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಸುತ್ತೋಲೆ ಸಂ:ಆರ್‌ಎಸ್‌ಆರ್/21/ಎಕ್ಸ್‌ಎಂಸಿ/2000-01 ದಿ:21-6-2000

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕ್ಕೆ ಕ್ರಮವಾಗಿ 2012 ಮತ್ತು 2013 ನೇ ವರ್ಷದಲ್ಲಿ ಮಾಡಲಾದ ತಿದ್ದುಪಡಿಗಳನ್ವಯ ಎಲ್ಲಾ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಡೆಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸಹಕಾರ ಚುನಾವಣಾ ಆಯೋಗವು ಈಗಾಗಲೇ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಜಿಲ್ಲಾ ಚುನಾವಣಾಧಿಕಾರಿಗಳ ನೇಮಕಾತಿ/ರಿಟರ್ನಿಂಗ್ ಆಫೀಸರ್‌ಗಳ ನೇಮಕಾತಿ ಬಗ್ಗೆ ಕ್ರಮವಿಡಲಾಗುತ್ತಿದೆ. ಅಲ್ಲದೇ ಚುನಾವಣಾ ಪ್ರಕ್ರಿಯೆಗಳನ್ನು ಸುಸೂತ್ರವಾಗಿ ನಡೆಸುವ ಸಂಬಂಧ ಆಗಾಗ್ಗೆ ಮಾರ್ಗಸೂಚಿಗಳನ್ನು ನೀಡಲಾಗುತ್ತಿದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 18(8) ರಲ್ಲಿ ಸಹಕಾರ ಸಂಘದ ನೌಕರರು ಚುನಾವಣೆಯಲ್ಲಿ ಮತ್ತು ರಾಜಕೀಯದಲ್ಲಿ ಭಾಗವಹಿಸುವ ಕುರಿತು ಪ್ರಸ್ತಾಪಿಸಲಾಗಿದ್ದು, ಅದರಂತೆ-

ಸಂಘದ ಯಾವ ನೌಕರನೇ ಆಗಲೀ-

(ಎ) ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕೀಯದಲ್ಲಿ ಭಾಗವಹಿಸುವ ಯಾವುದೇ ಸಂಘಟನೆಯು ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅನ್ಯಥಾ ಸಂಬಂಧ ಹೊಂದಿರಬಾರದು. ಯಾವುದೇ ರಾಜಕೀಯ ಚಳುವಳಿಗೆ ಅಥವಾ ಕಾರ್ಯಕ್ರಮಗಳಿಗೆ ವಂತಿಗೆ ನೀಡುವ ಮೂಲಕ ಅಥವಾ ಯಾವುದೇ ಇತರ ರೀತಿಯ ಸಹಾಯವನ್ನು ಮಾಡತಕ್ಕದ್ದಲ್ಲ.

(ಬಿ) ಲೋಕಸಭೆಯ, ವಿಧಾನಸಭೆಯ, ವಿಧಾನಪರಿಷತ್ತಿನ ಅಥವಾ ಸ್ಥಳೀಯ ಪ್ರಾಧಿಕಾರದ ಇಲ್ಲವೇ ಸಂಘದ ಆಡಳಿತ ಮಂಡಳಿಗೆ ಇಲ್ಲವೇ ಇತರ ಪದಾಧಿಕಾರಿಗಳ ಚುನಾವಣೆಯಲ್ಲಿ ಸಂಘದ ಯಾವ ನೌಕರನೂ ಪ್ರಚಾರ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡತಕ್ಕದ್ದಲ್ಲ, ಇಲ್ಲವೇ ಅದರ ಸಂಬಂಧದಲ್ಲಿ ತನ್ನ ಪ್ರಭಾವ ಬೀರತಕ್ಕದ್ದಲ್ಲ. ಆದರೆ,

(i) ಅಂತಹ ಚುನಾವಣೆಯಲ್ಲಿ ಮತಹಾಕಲು ಅರ್ಹನಾದ ಸಹಕಾರ ಸಂಘದ ಒಬ್ಬ ನೌಕರನು ಮತ ಹಾಕುವ ತನ್ನ ಹಕ್ಕನ್ನು ಚಲಾಯಿಸಬಹುದು.

(ii) ಸದ್ಯ ಜಾರಿಯಲ್ಲಿರುವ ಯಾವುದೇ ಕಾನೂನಿನನ್ವಯ ಸಹಕಾರ ಸಂಘದ ಒಬ್ಬ ನೌಕರನು ಚುನಾವಣೆಯನ್ನು ನಡೆಸಲು ತನಗೆ ವಹಿಸಿದ ಕರ್ತವ್ಯದ ಯುಕ್ತ ನಿರ್ವಹಣೆಯ ಮೂಲಕ ಸಹಾಯ ಮಾಡಿದ್ದನೆಂಬ ಒಂದೇ ಒಂದು ಕಾರಣಕ್ಕಾಗಿ ಉಪನಿಯಮ 18(8) ರ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಪರಿಗಣಿಸತಕ್ಕದ್ದಲ್ಲ.

**ವಿವರಣೆ:-** ಸಹಕಾರ ಸಂಘದ ನೌಕರನು ತನ್ನ ಮೇಲೆ ತನ್ನ ವಾಹನಕ್ಕೆ ಅಥವಾ ವಾಸದ ಮನೆ ಮೇಲೆ ಯಾವುದೇ ಚುನಾವಣೆ ಚಿಹ್ನೆಯನ್ನು ಪ್ರದರ್ಶಿಸಿದಲ್ಲಿ ಅಂತಹ ಕಾರ್ಯವು ಉಪನಿಯಮದ ಅರ್ಥದಲ್ಲಿ ಚುನಾವಣೆ ಸಂಬಂಧದಲ್ಲಿ ತನ್ನ ಪ್ರಭಾವವನ್ನು ಬೀರಿದ್ದಾನೆಂದು ಅರ್ಥ.

ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 18(9) ರಲ್ಲಿ ಶಿಕ್ಷೆಗಳ ವಿಷಯವಾಗಿ ಪ್ರಸ್ತಾಪಿಸಿದ್ದು, ನಿಯಮ 18(6), 18(7) ಮತ್ತು 18(8) ರ ಉಪಬಂಧಗಳನ್ನು ಉಲ್ಲಂಘಿಸುವ ಯಾವ ನೌಕರನೇ ಆಗಲಿ ಆಡಳಿತ ಮಂಡಳಿಯವರು ನಿರ್ಧರಿಸಬಹುದಾದಂತಹ ಶಿಕ್ಷೆಗೆ ಗುರಿಯಾಗತಕ್ಕದ್ದು. ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 18(10) ರಂತೆ ಸಿಬ್ಬಂದಿ ವರ್ಗದ ಯಾವುದೇ ಸದಸ್ಯನು ಯೋಗ್ಯ ಹಾಗೂ ಶಿಫಾರಸ್ಸು ಕಾರಣಗಳಿಗಾಗಿ ಶಿಕ್ಷಿಸಲ್ಪಡಬಹುದು. ಆಡಳಿತ ಮಂಡಳಿಯು ಅಥವಾ ಅದರಿಂದ ಅಧಿಕಾರ ಪಡೆದ ವ್ಯಕ್ತಿಯು ದೋಷಾರೋಪಣೆ ಮಾಡುವ, ದಂಡ ವಿಧಿಸುವ, ಅಮಾನತ್ತಿನಲ್ಲಿಡುವ, ಹಿಂಬಡ್ತಿ ಮಾಡುವ, ಕೆಲಸದಿಂದ ವಜಾ ಮಾಡುವ ಅಥವಾ ವೇತನ ಏರಿಕೆಯನ್ನು ತಡೆಹಿಡಿಯುವ ಮುಕ್ತ ಅಧಿಕಾರವುಳ್ಳವನಾಗಿರತಕ್ಕದ್ದು.

ಅಲ್ಲದೇ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 68 ರಲ್ಲಿ ಅಪರಾಧಗಳು ಮತ್ತು ದಂಡನೆಗಳ ಬಗ್ಗೆ ವಿವರಿಸಲಾಗಿದೆ. ಅದರಂತೆ ಕಾನೂನಿಗೆ ವಿರುದ್ಧವಾದ ಕಾರ್ಯನಿರ್ವಹಣೆಯನ್ನು ಮಾಡುವ, ಚುನಾವಣೆ ನಡೆಸುವ ಬಗ್ಗೆ ಶಾಸನಬದ್ಧ ಕರ್ತವ್ಯಗಳ ನಿರ್ವಹಣೆಯಲ್ಲಿ ವಿಫಲವಾದಲ್ಲಿ ಪ್ರಜಾಪ್ರತಿನಿಧಿ ಅಧಿನಿಯಮ 1951 ರಂತೆ 'ಭ್ರಷ್ಟ ಪದ್ಧತಿಗಳು' ಎಂದು ಪರಿಗಣಿತವಾಗುವುದರಿಂದ ಅಂತಹ ಅಪರಾಧವೆಸಗಿದ ಮುಖ್ಯಕಾರ್ಯನಿರ್ವಾಹಕ, ಯಾವುದೇ ಸಹಕಾರಿ ನೌಕರರ ವಿರುದ್ಧ ಅಪರಾಧವೆಸಗಿದ ಬಾಬ್ತು ದಂಡನೆ ಸೇರಿದಂತೆ ಸೆರೆಮನೆ ವಾಸದ ಶಿಕ್ಷೆಯನ್ನು ವಿಧಿಸಲು ಅವಕಾಶವಿರುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮವಿಡಲು ಆಡಳಿತ ಮಂಡಳಿಗೆ ಸೂಚನೆ ನೀಡುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ:-**

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು
3) ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು